# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ದಿನಾಂಕ 07-10-2020ರಂದು ಅಪರಾಹ್ನ 3.30 ಗಂಟೆಗೆ ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಜಿ. ಹೇಮಂತಕುಮಾರ್ | – ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಶ್ರೀ ಆರ್. ಮೂಗೇಶಪ್ಪ<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ | – ಸದಸ್ಯರು |
| 3. | ಪ್ರೊ.ಡಿ.ಆನಂದ | – ಸದಸ್ಯರು |
| 4. | ಶ್ರೀ. ಎಂ.ಬಿ.ಗಪ್ಪಣ್ಣ | – ಸದಸ್ಯರು |
| 5. | ಡಾ. ಚೈತ್ರ ನಾರಾಯಣ | – ಸದಸ್ಯರು |
| 6. | ಶ್ರೀ. ಕುಮಾರ | – ಸದಸ್ಯರು |
| 7. | ಶ್ರೀಮತಿ ಕೆ.ನಾಗರತ್ನಮ್ಮ | – ಸದಸ್ಯರು |
| 8. | ಶ್ರೀ. ದಿನೇಶ್ ಎಂ ಗಾವಂಕರ್ | – ಸದಸ್ಯರು |
| 9. | ಶ್ರೀ. ಆರ್. ಪ್ರದೀಪ್ ಕುಮಾರ್ ದೀಕ್ಷಿತ್ | – ಸದಸ್ಯರು |
| 10. | ಪ್ರೊ. ಎಸ್. ಡಿ. ದೊಡ್ಡಾಚಾರಿ | – ಸದಸ್ಯರು |
| 11. | ಶ್ರೀಮತಿ ಪವಿತ್ರ. ವೈ.ಕೆ | – ಸದಸ್ಯರು |
| 12. | ಡಾ. ಈ. ಸಿ. ನಿಂಗರಾಜ್ ಗೌಡ | – ಸದಸ್ಯರು |
| 13. | ಡಾ. ಎಂ. ಎಸ್. ದಾಮೋಧರ್ | – ಸದಸ್ಯರು |
| 14. | ಡಾ. ಸೈಯದ್ ಕಾರ್ಝಾ ಮೊಹಿದ್ದಿನ್ | – ಸದಸ್ಯರು |
| 15. | ಪ್ರೊ. ಕೆ. ಎಂ. ಮಹದೇವನ್<br>ಕುಲಸಚಿವರು (ಪರೀಕ್ಷಾಂಗ) | – ಸದಸ್ಯರು |
| 16. | ಪ್ರೊ. ಆರ್. ಶಿವಪ್ಪ | –ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

**ವಿಶೇಷ ಆಹ್ವಾನಿತರು:**

1. ಪ್ರೊ. ಟಿ.ಎಸ್.ದೇವರಾಜ, ಹಣಕಾಸು ಅಧಿಕಾರಿ, ಮೈವಿವಿ, ಮೈಸೂರು

**ಹಾಜರಾಗದ ಸದಸ್ಯರು:**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ, ಪ್ರಾದೇಶಿಕ ಕಛೇರಿ, ಮೈಸೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಶ್ರೀ. ಟಿ. ರಾಮಕೃಷ್ಣ, ಎ.ಡಿ.ಬಿಳಿಗೌಡ ಪ್ರ.ದ.ಕಾ, ಕೊಪ್ಪ, ಮದ್ದೂರು ತಾ ಮಂಡ್ಯ ಜಿಲ್ಲೆ.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
6. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು. ನಂತರ ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ, ನಿರ್ಗಮಿಸಿರುವ ಶ್ರೀಮತಿ.ಸಹನಾ ಶಿವಪ್ಪ, ಬೆಂಗಳೂರು, ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು ಹಾಗೂ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಶ್ರೀ.ಎಂ.ಬಿ.ಗಪ್ಪಣ್ಣ, ಕೊಡಗು, ಇವರನ್ನು ಸಭೆಯಲ್ಲಿ ಪರಿಚಯಿಸಿ ಸ್ವಾಗತಿಸಿದರು.

ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| 2020-21 Spl. 10.1 | 2020-21ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಆನ್‌ಲೈನ್ ಸಂಯೋಜನಾ ವರದಿಗಳನ್ನು ಪ್ರಾಧಿಕಾರಗಳ ಅನುಮೋದನೆಗಾಗಿ ಮಂಡಿಸುವ ಬಗೆಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, 2020-21ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಆನ್‌ಲೈನ್ ಸಂಯೋಜನಾ ವರದಿಗಳನ್ನು ಸರ್ಕಾರಕ್ಕೆ ಕಳುಹಿಸಿ 2020-21ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪದವಿ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಹಾಗೂ ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು/ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು/ವಿಷಯಗಳು/ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ ನವೀಕರಿಸಲು ಹಾಗೂ ಹಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು/ಸಂಪೂರ್ಣ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳನ್ನು ನವೀಕರಿಸಲು/ ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು/ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಹಾಲಿ ಇರುವ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ಯುಜಿಸಿ ಆ್ಯಡ್ ಆನ್ ಕೋರ್ಸುಗಳನ್ನು ಮುಂದುವರೆಸಲು/ ಹೊಸದಾಗಿ ಸಂಯೋಜನೆ ನೀಡಲು/ಹಾಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗೆಗೆ ಸರ್ಕಾರದಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ. ಈ ಸಂಬಂಧ ಈಗಾಗಲೇ ಶಿಕ್ಷಣ ಮಂಡಳ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು ಹಾಗೂ ಸಿಂಡಿಕೇಟ್ ಸದಸ್ಯರು ಒಪ್ಪಿದಲ್ಲಿ ಕಾಲೇಜು ಅಭಿವೃದ್ಧಿ ಮಂಡಳ ನಿರ್ದೇಶಕರಾದ ಡಾ.ಎಸ್.ಶ್ರೀಕಂಠಸ್ವಾಮಿಯವರು ಸಭೆಯಲ್ಲಿ 2020-21ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಆನ್‌ಲೈನ್ ಸಂಯೋಜನಾ ವರದಿಗಳನ್ನು ಸಂಕ್ಷಿಪ್ತವಾಗಿ ಮಂಡಿಸುತ್ತಾರೆಂದು ತಿಳಿಸಿದರು. ಇದಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು.<br><br>2020-21ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಆನ್‌ಲೈನ್ ಸಂಯೋಜನಾ ವರದಿಗಳನ್ನು ಕಾಲೇಜು ಅಭಿವೃದ್ಧಿ ಮಂಡಳ ನಿರ್ದೇಶಕರಾದ ಡಾ.ಎಸ್.ಶ್ರೀಕಂಠಸ್ವಾಮಿಯವರು ಸಭೆಯಲ್ಲಿ ಈ ಕೆಳಕಂಡಂತೆ ಮಂಡಿಸಿದರು.<br><br>ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಹಾಲಿ ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59, ಮತ್ತು ಉಪಪ್ರಕರಣ (2) ಹಾಗೂ (10) ರನ್ವಯ ಸಂಯೋಜನೆ ಪ್ರಕ್ರಿಯೆಗಳನ್ನು ಮಾರ್ಚ್ 30ರೊಳಗಾಗಿ ಪೂರ್ಣಗೊಳಿಸಿ, ಸರ್ಕಾರಕ್ಕೆ ಸಂಯೋಜನಾ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ. ಕೋವಿಡ್-19 ವ್ಯಾಪಕವಾಗಿ ಹರಡುತ್ತಿರುವುದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದಂತೆ ಮಾರ್ಚ್ 2020 ರಿಂದ ಮೇ 2020 ರವರೆಗೆ ಸರ್ಕಾರಿ ರಜೆಯು ಘೋಷಣೆಯಾದ ಕಾರಣ ಸಂಯೋಜನಾ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ. ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶದಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಸಂಯೋಜಿತಾ ಪ್ರಕ್ರಿಯೆಗಳನ್ನು ಆನ್‌ಲೈನ್‌ನಲ್ಲಿ ಕೈಗೊಳ್ಳಲು ಸೂಚಿಸಿರುವುದರಿಂದ, 2020-21ನೇ ಶೈಕ್ಷಣಿಕ ಸಾಲಿನ ಎಲ್ಲಾ ಸಂಯೋಜನಾ ಕಾಲೇಜುಗಳ (ಸ್ವಾಯತ್ತ ಕಾಲೇಜುಗಳನ್ನು ಹೊರತುಪಡಿಸಿ) ಸಂಯೋಜನಾ ಪ್ರಕ್ರಿಯೆಗಳನ್ನು ಆನ್‌ಲೈನ್ ಮೂಲಕ ಕೈಗೊಂಡು, ಸ್ಥಳೀಯ ವಿಚಾರಣಾ ಸಮಿತಿಯವರು ಸಲ್ಲಿಸಿರುವ ಆನ್‌ಲೈನ್ ಸಂಯೋಜನಾ ವರದಿಯು ಈ ಕೆಳಕಂಡಂತಿರುತ್ತದೆ.<br><br>I. 2020-21ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಿಗೆ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಯೋಜನೆ ಮುಂದುವರೆಸಲು ಸಮಿತಿಗಳು ಶಿಫಾರಸ್ಸು ಮಾಡಿರುವ ಒಟ್ಟು 169 ಪ್ರಥಮ ದರ್ಜೆ ಕಾಲೇಜುಗಳು. |

I(b). 2020-21ನೇ ಶೈಕ್ಷಣಿಕ ಸಾಲಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೆ ಸಂಯೋಜನೆ ಮುಂದುವರಿಸುವಂತೆ ಶಿಫಾರಸ್ಸು ಮಾಡಿರುವ ಪ್ರಥಮ ದರ್ಜೆ ಕಾಲೇಜುಗಳು:

| ಕ್ರ, ಸಂ | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು |
|---|---|---|
| 1. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ | BA, B.Sc, B.Com BBA |
| 2. | ಕಲ್ಪತರು ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪೇಟೆ | BA, B.Com |
| 3. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ | B.Com |

2020-21ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಹೊಸ ಸಂಯೋಜನೆಗೆ 03 ಕಾಲೇಜುಗಳಲ್ಲಿ ಶಿಫಾರಸ್ಸು ಮಾಡಲಾಗಿದೆ:

| ಕ್ರ, ಸಂ | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು |
|---|---|---|
| 1. | ಮೈಸೂರ್ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್, ಮೇಟಗಳ್ಳಿ, ಮೈಸೂರು | M.Com-40 |
| 2. | ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜ್, ಹಾಸನ | M.Com-40 |
| 3. | ಶ್ರೀ. ಡಿ. ದೇವರಾಜು ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು | M.Sc. – Physics-30 |

III. 2020-21ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಕಾಲೇಜುಗಳಲ್ಲಿರುವ ಶಿಕ್ಷಣ ಮತ್ತು ಸ್ನಾತಕೋತ್ತರ ಶಿಕ್ಷಣ ಕೋರ್ಸುಗಳಿಗೆ ಅಂದರೆ ಬಿ.ಎಡ್., ಬಿ.ಎ.ಬಿ.ಎಡ್., ಬಿ.ಎಸ್ಸಿ.ಬಿ.ಎಡ್., ಬಿ.ಪಿ.ಎಡ್., ಎಂ.ಎಡ್., ಎಂ.ಎಸ್ಸಿ.ಎಡ್., ಎಂ.ಪಿ.ಎಡ್ ಕೋರ್ಸುಗಳಿಗೆ ಸಂಯೋಜನೆ ಮುಂದುವರಿಕೆಗೆ 35 ಕಾಲೇಜುಗಳು ಇರುತ್ತದೆ.

IV. 2020-21ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪದವಿ ಕಾಲೇಜುಗಳ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ / ಹೊಸ ಕೋರ್ಸು / ವಿಷಯಸಮೂಹ / ಹೊಸ ಭಾಷೆ / ಶಾಶ್ವತ ಸಂಯೋಜನೆಗೆ ಶಿಫಾರಸ್ಸು ಮಾಡಿರುವ ವಿವರ:

ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣಕ್ಕೆ ಸಮಿತಿಯು 05 ಪ್ರಥಮ ದರ್ಜೆ ಕಾಲೇಜುಗಳಿಗೆ ಶಿಫಾರಸ್ಸು ಮಾಡಿರುತ್ತದೆ.

| ಕ್ರ.. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು | ಹಾಲಿ ಇರುವ ಪ್ರವೇಶಾತಿ ಸಂಖ್ಯೆ | ಸಮಿತಿ ಹೆಚ್ಚುವರಿ ಮಂಜೂರು ಮಾಡಿರುವ ಪ್ರವೇಶಾತಿ ಸಂಖ್ಯೆ |
|---|---|---|---|---|
| 1 | ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು | B.Com | 60 | 40 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು | B.Com | 120 | 60 |
| 3 | ಜ್ಞಾನಧಾರೆ ಪ್ರಥಮ ದರ್ಜೆ ಕಾಲೇಜು, ಹುಣಸೂರು | B.Com | 60 | 40 |
| 4 | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | B.Com | 120 | 60 |
| | | BCA | 60 | 60 |
| 5 | ಎನ್.ಡಿ.ಆರ್.ಕೆ. ಪ್ರಥಮ ದರ್ಜೆ ಕಾಲೇಜು, ಹಾಸನ | BCA | 60 | 40 |

ಹೊಸ ಕೋರ್ಸ್‌ಗಳಿಗೆ ಸಮಿತಿಯು 06 ಕಾಲೇಜುಗಳಿಗೆ ಶಿಫಾರಸ್ಸು ಮಾಡಿರುತ್ತದೆ.

| ಕ್ರ. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು | ಕಾಂಬಿನೇಷನ್ | ಪ್ರವೇಶಾತಿ ಸಂಖ್ಯೆ |
|---|---|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ | B.Sc | PCM | 40 |
| 2 | ಸೇವಾ ಭಾರತೀ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ | B.Sc | PCM/PMCs/ CBZ | 60 |
| 3 | ಶಾಂತಿ ಕಾಲೇಜು, ಮಳವಳ್ಳಿ | B.A. | JEPsy | 60 |
| 4 | ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜು, ಚಿನಕುರುಳಿ | B.A. | HEP/HEK/ HEE | 60/60/ 60 |
| 5 | ಎನ್. ಐ.ಇ. ಪ್ರಥಮ ದರ್ಜೆ ಕಾಲೇಜು, ಮೈಸೂರು | BBA | - | 60 |
| 6 | ಮಾಂಡವ್ಯ ಪ್ರಥಮ ದರ್ಜೆ ಕಾಲೇಜು, ಮಂಡ್ಯ | B.Com | - | 60 |

ಶಾಶ್ವತ ಸಂಯೋಜನೆಗೆ ಸಮಿತಿಯು 08 ಪ್ರಥಮ ದರ್ಜೆ ಕಾಲೇಜುಗಳಿಗೆ ಶಿಫಾರಸ್ಸು ಮಾಡಿರುತ್ತದೆ.

| ಕ್ರ. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸು | ಕಾಂಬಿನೇಷನ್ | ಪ್ರವೇಶಾತಿ ಸಂಖ್ಯೆ |
|---|---|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ. ನರಸೀಪುರ | B.Sc | PMCs | 30 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು | B.A. | HEP | 90 |
| | | B.Com | - | 90 |
| | | B.Sc | PCM | 60 |
| 3 | ಮೈಸೂರು ಮಕ್ಕಳಕೂಟ ಮತ್ತು ಧರ್ಮಸ್ಥಳ ಮಂಜುನಾಥ ಕಾಲೇಜು, ಮೈಸೂರು | B.Com | - | 120 |
| 4 | ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ಮೈಸೂರು | B.Com | - | 60 |
| 5 | ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು | B.Com | - | 60 |
| 6 | ಪಿ.ಇ.ಎಸ್. ಪ್ರಥಮ ದರ್ಜೆ ಕಾಲೇಜು, ಮಂಡ್ಯ | B.Sc | PCM | 100 |
| | | | CBZ | 48 |
| 7 | ಎನ್. ಐ.ಇ. ಪ್ರಥಮ ದರ್ಜೆ ಕಾಲೇಜು, ಮೈಸೂರು | B.Com | - | 60 |
| 8 | ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು | B.Com | - | 60 |
| 9 | ಸೇವಾ ಭಾರತೀ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ | B.Com | - | 60 |

V. 2020-21ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಕೆ ಕೋರಿ ಅರ್ಜಿ ಸಲ್ಲಿಸಿದ್ದು, ಸ್ಥಳೀಯ ವಿಚಾರಣಾ ಸಮಿತಿಯು ಶಿಫಾರಸ್ಸು ಮಾಡಿಲ್ಲದ ಸ್ನಾತಕೋತ್ತರ ಕೋರ್ಸಿನ ವಿವರ:

| ಕ್ರ.ಸಂ | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸು |
|---|---|---|
| 1 | ಶ್ರೀ. ಡಿ. ದೇವರಾಜು ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು | M.Sc.-Chemistry |

VI. 2020-21ನೇ ಶೈಕ್ಷಣಿಕ ಸಾಲಿಗೆ NCTE ನವೀಕರಣ ಮಾನ್ಯತೆ ಇಲ್ಲದ ಕಾರಣ ಸಂಯೋಜನೆ ನಿರಾಕರಿಸಿರುವ ಶಿಕ್ಷಣ (ಬಿ.ಎಡ್.) ಕಾಲೇಜುಗಳ ವಿವರ:

| ಕ್ರ.ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | |
|---|---|---|
| 1. | ವಾತ್ಸಲ್ಯ ಕಾಲೇಜ್ ಆಫ್ ಎಜುಕೇಷನ್, ಮೈಸೂರು | NCTE ಮಾನ್ಯತೆ ಇಲ್ಲದ ಕಾರಣ ಸಂಯೋಜನೆಯನ್ನು ನಿರಾಕರಿಸಿದೆ. |
| 2. | ಶ್ರೀ ಯಡತೊರೆ ಶಿಕ್ಷಣ ಕಾಲೇಜು, ಶ್ರೀ ರಾಮ ಬ್ಲಾಕ್, ಕೆ.ಆರ್.ನಗರ | |
| 3 | ವಿಜಯ ಕಾಲೇಜ್ ಆಫ್ ಎಜುಕೇಷನ್, ಪಾಂಡುಪುರ | |
| 4 | ಮೌಲನಾ ಅಜಾದ್ ಶಿಕ್ಷಣ ಕಾಲೇಜು, ರಾಜೇಂದ್ರನಗರ, ಮೈಸೂರು | |

VII. 2020-21ನೇ ಶೈಕ್ಷಣಿಕ ಸಾಲಿಗೆ ಸರ್ಕಾರದ ಆದೇಶದಂತೆ ಈ ಕೆಳಕಂಡ ಪ್ರಥಮ ದರ್ಜೆ ಕಾಲೇಜುಗಳನ್ನು ಮತ್ತೊಂದು ಕಡೆಗೆ ಸ್ಥಳಾಂತರಿಸಲಾಗಿದೆ.

| ಕ್ರ. ಸಂ. | ಪ್ರಸ್ತುತ ಕಾಲೇಜು ನಿರ್ವಹಿಸುತ್ತಿರುವ ವಿವರ | ಸ್ಥಳಾಂತರಗೊಂಡ ವಿಳಾಸ |
|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರೇಹಳ್ಳಿ, ಹಾಸನ ಜಿಲ್ಲೆ | ಮಲ್ಲೇಶ್ವರಂ, ಬೆಂಗಳೂರು ನಗರ |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿಮೈಸೂರು, ಹಾಸನ ಜಿಲ್ಲೆ | ಶಾಂತಿ ನಗರ, ಬೆಂಗಳೂರು ನಗರ |

VIII. 2020-21ನೇ ಶೈಕ್ಷಣಿಕ ಸಾಲಿಗೆ ಸರ್ಕಾರದ ಆದೇಶದಂತೆ ಈ ಕೆಳಕಂಡ ಪ್ರಥಮ ದರ್ಜೆ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾಗಿ ಪರಿವರ್ತಿಸಲು ಕಾಲೇಜು ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರದ ಆದೇಶ ನೀಡಲಾಗಿದೆ.

| ಕ್ರ. ಸಂ. | ಪ್ರಸ್ತುತ ಕಾಲೇಜುಗಳ ವಿವರ |
|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆರಕಣಾಂಬಿ, ಚಾಮರಾಜನಗರ ಜಿಲ್ಲೆ |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆತ್ತೂರು, ಹಾಸನ ಜಿಲ್ಲೆ |

IX. 2020-21ನೇ ಶೈಕ್ಷಣಿಕ ಸಾಲಿನಲ್ಲಿ 05 ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾಂಭಿಸಲು ಸಂಯೋಜನೆಗೆ ಶಿಫಾರಸ್ಸು ಮಾಡಿರುವ ಕಾಲೇಜುಗಳ ವಿವರ:

| ಕ್ರ, ಸಂ | ಶಿಕ್ಷಣ ಸಂಸ್ಥೆಯ ಹೆಸರು | ಕೋರ್ಸ್ |
|---|---|---|
| 1 | ದೇವಲಾ ಮಹರ್ಷಿ ಪ್ರಥಮ ದರ್ಜೆ ಕಾಲೇಜು, ಮೈಸೂರು | ಬಿ.ಕಾಂ, ಬಿ.ಬಿ.ಎ., ಬಿ.ಸಿ.ಎ |
| 2 | ಸಮೃದ್ಧಿ ಪ್ರಥಮ ದರ್ಜೆ ಕಾಲೇಜು, ಮೈಸೂರು | ಬಿ.ಕಾಂ, ಬಿ.ಬಿ.ಎ. |
| 3 | ಡಾ. ಜಿ. ಮಾದೇಗೌಡ ಕಾಲೇಜ್ ಆಫ್ ಎಕ್ಸಲೆನ್ಸ್, ಭಾರತೀನಗರ, ಮಂಡ್ಯ | ಬಿ.ಎಸ್ಸಿ –PCM, CBZ, ಬಿ.ಕಾಂ |
| 4 | ಆಚಾರ್ಯ ಪದವಿ ಕಾಲೇಜು, ಹಾಸನ | ಬಿ.ಕಾಂ, ಬಿ.ಸಿ.ಎ. |
| 5 | ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ | ಬಿ.ಎ.– HEP, ಬಿ.ಕಾಂ., ಬಿ.ಎಸ್ಸಿ– PMCs |

| | |
|---|---|
| | ಮಾನ್ಯ ಕುಲಸಚಿವರು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ.ಎಸ್.ಶ್ರೀಕಂಠಸ್ವಾಮಿ ಅವರ ನಾಲ್ಕು ವರ್ಷದ ಅವಧಿಯು ಪೂರ್ಣಗೊಂಡಿದ್ದು, ಇವರ ಅವಧಿಯಲ್ಲಿ ಕಾಲೇಜುಗಳಿಂದಾಗಲೀ ಅಥವಾ ಆಡಳಿತಾತ್ಮಕವಾಗಲೀ ಯಾವುದೇ ವಿವಾದಕ್ಕೂ ಒಳಗಾಗದೇ ಸುಸೂತ್ರವಾಗಿ ಕಾರ್ಯನಿರ್ವಹಿಸಿರುವುದಕ್ಕೆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಹಾಗೂ ಸಿಂಡಿಕೇಟ್ ಸದಸ್ಯರುಗಳ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.<br><br>ಡಾ.ಈ.ಸಿ.ನಿಂಗರಾಜ್ ಗೌಡರವರು ಮಾತನಾಡಿ, ಕಾಲೇಜುಗಳ ಸಂಯೋಜನಾ ವರದಿ ಸಲ್ಲಿಸಲು ಸ್ಥಳೀಯ ತನಿಖಾ ಸಮಿತಿಗೆ ಸಿಂಡಿಕೇಟ್ ಸದಸ್ಯರುಗಳನ್ನು ಪ್ರಸ್ತುತ ಸದಸ್ಯರುಗಳನ್ನಾಗಿ ನೇಮಕ ಮಾಡಿರುವುದಕ್ಕೆ ಮಾನ್ಯ ಕುಲಪತಿಯವರಿಗೆ, ಕುಲಸಚಿವರಿಗೆ ಹಾಗೂ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಮುಂದುವರೆದು ಇನ್ನು ಮುಂದೆಯೂ ಕಾಲೇಜುಗಳ ಸಂಯೋಜನಾ ವರದಿ ಸಲ್ಲಿಸುವ ಸ್ಥಳೀಯ ತನಿಖಾ ಸಮಿತಿಗೆ ಪ್ರಸ್ತುತ ರಾಜ್ಯ ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ಎಂಟು (08) ಸಿಂಡಿಕೇಟ್ ಸದಸ್ಯರುಗಳಲ್ಲಿ ಒಬ್ಬರು ಅಥವಾ ಇಬ್ಬರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಸಭೆಯಲ್ಲಿ ತಿಳಿಸಿದರು.<br><br>ಇದಕ್ಕೆ ಮಾನ್ಯ ಕುಲಪತಿಯವರು ಮಾತನಾಡಿ, ಸ್ಥಳೀಯ ತನಿಖಾ ಸಮಿತಿಗೆ ಸಿಂಡಿಕೇಟ್ ಸದಸ್ಯರುಗಳನ್ನು ನೇಮಕ ಮಾಡುವ ಸಂಬಂಧ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಸರ್ಕಾರವು ಅನುಮತಿ ಬಂದ ನಂತರ ತಮ್ಮ ಮನವಿಯನ್ನು ಪುರಸ್ಕರಿಸಲಾಗುವುದೆಂದು ತಿಳಿಸಿದರು. |
| ತೀರ್ಮಾನ | 2020-21ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಆನ್‌ಲೈನ್ ಸಂಯೋಜನಾ ವರದಿಗಳನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 2020-21<br>Spl. 10.2 | ಮೈಸೂರು ವಿಶ್ವವಿದ್ಯಾನಿಲಯದ ಆನ್‌ಲೈನ್ ಪ್ರೋಗ್ರಾಂಗಳ ಬಗೆಗೆ. |
| | ಎನ್‌ಐಆರ್‌ಎಫ್ ರ್ಯಾಂಕಿಂಗ್‌ನಲ್ಲಿ 100ರೊಳಗೆ ಸ್ಥಾನ ಪಡೆದ ವಿಶ್ವವಿದ್ಯಾನಿಲಯಗಳಿಗೆ ಅನ್‌ಲೈನ್ ಕೋರ್ಸ್ ಪ್ರಾರಂಭಿಸಲು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ನವದೆಹಲಿ ಅನುಮತಿ ನೀಡಿರುತ್ತದೆ. ಎನ್‌ಐಆರ್‌ಎಫ್ ರ್ಯಾಂಕಿಂಗ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯವು 27ನೇ ರ್ಯಾಂಕ್ ಪಡೆದಿದ್ದು, ಅನ್‌ಲೈನ್ ಕೋರ್ಸ್‌ಗಳಿಗೆ ಬೇಡಿಕೆ ಇರುವುದರಿಂದ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ 03 ಸ್ನಾತಕ ಹಾಗೂ 10 ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಂಬಂಧ ಶಿಕ್ಷಣ ಮಂಡಳಿ ಹಾಗೂ ಸಿಂಡಿಕೇಟ್ ಸಭೆಗಳ ಅನುಮೋದನೆಯನ್ನು ಕಾಯ್ದಿರಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ ಹಾಗೂ ಮುಂದಿನ ವರ್ಷದಿಂದ ಇನ್ನು ಹೆಚ್ಚು ಕೋರ್ಸುಗಳನ್ನು ಪ್ರಾರಂಭಿಸುವ ಸಂಬಂಧ ಎಲ್ಲಾ ವಿಭಾಗದ ಅಧ್ಯಕ್ಷರುಗಳೊಡನೆ ಸಭೆ ಕರೆದು ಅನ್‌ಲೈನ್ ಕೋರ್ಸ್‌ಗೆ 5-6 ಕೋರ್ಸುಗಳನ್ನು ಸೇರ್ಪಡೆಗೊಳಿಸಲು ಕ್ರಮ ವಹಿಸಲಾಗುತ್ತದೆಂದು ಮಾನ್ಯ ಕುಲಪತಿಯವರು ಸಭೆಯಲ್ಲಿ ತಿಳಿಸಿದರು.<br><br>ಮಾನ್ಯ ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಅನ್‌ಲೈನ್ ಕೋರ್ಸ್‌ಗಳಿಗೆ ಬೇಡಿಕೆ ಹಾಗೂ ಪ್ರಾಮುಖ್ಯತೆಯಿರುವುದರಿಂದ ಪ್ರತಿ ವರ್ಷವೂ ಹೆಚ್ಚು ಹೆಚ್ಚು ಕೋರ್ಸುಗಳನ್ನು ಅನ್‌ಲೈನ್ ಕೋರ್ಸುಗಳಾಗಿ ಪ್ರಾರಂಭಿಸಿದರೆ ಪ್ರಪಂಚದ ಎಲ್ಲಾ ಮೂಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನೀಡುವುದರೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಆದಾಯವು ಬರುತ್ತದೆಂದು ತಿಳಿಸಿದರು.<br><br>ಡಾ.ಈ.ಸಿ.ಲಿಂಗರಾಜ ಗೌಡರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನ್‌ಲೈನ್ ಕೋರ್ಸ್ ಹಾಗೂ ದೂರ ಶಿಕ್ಷಣ ಕೋರ್ಸುಗಳನ್ನು ಪ್ರಾರಂಭಿಸುವುದರಿಂದ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠೆಯು ಹೆಚ್ಚುತ್ತದೆಂದು ತಿಳಿಸಿದರು. |

ಡಾ.ಎಂ.ಎಸ್.ದಾಮೋಧರ ಮಾತನಾಡಿ, ಪರೀಕ್ಷಾ ವಿಭಾಗದ ಉಸ್ತುವಾರಿಯೊಂದಿಗೆ ದೂರ ಶಿಕ್ಷಣ ಹಾಗೂ ಅನ್‌ಲೈನ್ ಕೋರ್ಸ್‌ಗಳಿಗೆ ಕುಲಸಚಿವರು (ಪರೀಕ್ಷಾಂಗ)ರವರೇ ನಿರ್ದೇಶಕರಾಗಿರುವುದರಿಂದ ಒಬ್ಬರಿಗೆ ಹೆಚ್ಚಿನ ಹೊರೆಯಾಗುವ ಹಿನ್ನೆಲೆಯಲ್ಲಿ, ದೂರ ಶಿಕ್ಷಣ ಹಾಗೂ ಆನ್‌ಲೈನ್ ಕೋರ್ಸುಗಳಿಗೆ ಪ್ರತ್ಯೇಕ ನಿರ್ದೇಶಕರನ್ನು ನೇಮಕ ಮಾಡುವುದು ಸೂಕ್ತವೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಆನ್‌ಲೈನ್ ಕೋರ್ಸ್‌ಗೆ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಬಹುದೆಂದು ಯುಜಿಸಿಯು ಅಧಿಸೂಚನೆಯಲ್ಲಿ ತಿಳಿಸಿರುವುದರಿಂದ, ಮುಂದಿನ ದಿನಗಳಲ್ಲಿ ಆನ್‌ಲೈನ್ ಕೋರ್ಸ್‌ಗೆ ನಿರ್ದೇಶಕರನ್ನು ನೇಮಕ ಮಾಡಲಾಗುವುದು ಹಾಗೂ ಈಗ ಅಧಿಸೂಚನೆ ಹೊರಡಿಸಿರುವ 13 ಅನ್‌ಲೈನ್ ಕೋರ್ಸುಗಳಿಗೆ ಸಭೆಯು ಅನುಸಮರ್ಥನೆ ನೀಡಬೇಕೆಂದು ತಿಳಿಸಿದರು.

**ತೀರ್ಮಾನ**

ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಕೆಳಕಂಡ 13 ಅನ್‌ಲೈನ್ ಕೋರ್ಸುಗಳನ್ನು ಪ್ರಾರಂಭಿಸಲು ದಿನಾಂಕ: 25-09-2020ರಂದು ವಿಶ್ವವಿದ್ಯಾನಿಲಯದಿಂದ ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಸರ್ವಾನುಮತದಿಂದ ಅನುಸಮರ್ಥಿಸಿತು.

| Sl.No. | Name of the Course |
|---|---|
| 1 | Bachelor of Business Administration (BBA) |
| 2 | Bachelor of Computer Applications (BCA) |
| 3 | Bachelor of Commerce (B.Com) |
| 4 | Master of Commerce (M.Com) |
| 5 | Master of Computer Application (MCA) – 2 Years |
| 6 | Master of Science (Information Technology) |
| 7 | Master of Business Administration |
| 8 | Master of Business Administration (Dual Specialization) |
| 9 | Master of Business Administration (Finance) |
| 10 | Master of Business Administration (Human Resource Management) |
| 11 | Master of Business Administration (Marketing Management) |
| 12 | Master of Business Administration (Operation Management) |
| 13 | Master of Business Administration (Supply Chain Management) |

**2020-21 Spl. 10.3** ಪುಸ್ತಕ ಪ್ರಕಟಣೆಗೆ ಸಂಬಂಧಿಸಿದಂತೆ ಸಂಭಾವನೆ ದರಗಳನ್ನು ನಿಗಧಿಪಡಿಸುವ ಬಗ್ಗೆ

ಮಾನ್ಯ ಕುಲಪತಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಈಗಾಗಲೇ ಪ್ರಕಟಗೊಂಡಿರುವ ಕೃತಿಗಳ ಸಂಪಾದಕರು, ಭಾಷಾಂತರಕಾರರು, ಕರಡು ಪರಿಶೀಲಕರು, ಡಿಟಿಪಿ ಕೆಲಸ ಮಾಡುವವರಿಗೆ ಹಾಗೂ ಇತರರಿಗೆ ಸುಮಾರು ಎಂಟು ವರ್ಷದಿಂದ ಸಂಭಾವನೆಯನ್ನು ಪರಿಷ್ಕರಿಸಿರುವುದಿಲ್ಲ. ಈ ಸಂಬಂಧ ಕೇಂದ್ರದ ಪ್ರಕಟಣ ಸಭೆಯಲ್ಲಿ ಕೇಂದ್ರಕ್ಕೆ ಸರ್ಕಾರದಿಂದ ಬಿಡುಗಡೆ ಮಾಡಿರುವ ವಿವಿಧ ಅನುದಾನ ಹಾಗೂ ಕೇಂದ್ರಕ್ಕೆ ನಿಗಧಿಪಡಿಸಲಾಗಿರುವ ಅನುದಾನದ ಬಡ್ಡಿ ದರದಲ್ಲಿ ಪರಿಷ್ಕೃತ ಸಂಭಾವನೆ ನಿಗಧಿಪಡಿಸಲು ಸಮಿತಿಯು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ, ಪುಸ್ತಕ ಪ್ರಕಟಣೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವವರಿಗೆ ಪರಿಷ್ಕೃತ ಸಂಭಾವನೆ ದರಗಳನ್ನು ನಿಗಧಿಪಡಿಸಲು ಸಭೆಯು ಅನುಮೋದನೆ ನೀಡಬೇಕೆಂದು ತಿಳಿಸಿದರು.

**ತೀರ್ಮಾನ**

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಪುಸ್ತಕ ಪ್ರಕಟಣೆಗೆ

ಸಂಬಂಧಿಸಿದಂತೆ ಕೆಳಕಂಡಂತೆ ಕಾರ್ಯನಿರ್ವಹಿಸುವವರಿಗೆ ಪರಿಷ್ಕೃತ ದರ ನಿಗಧಿಪಡಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

| ಕ್ರ.ಸಂ. | ವಿವರ | ಪರಿಷ್ಕೃತ ದರ |
|---|---|---|
| 1 | ಪ್ರಧಾನ ಸಂಪಾದಕರಿಗೆ ಸಂಭಾವನೆ (ಪ್ರತಿ ಪ್ರಕಟಿತ ಕೃತಿಗೆ) | 20,000/- |
| 2 | ಸಂಪಾದಕರಿಗೆ ಸಂಭಾವನೆ (ಪ್ರತಿ ಪ್ರಕಟಿತ ಕೃತಿಗೆ) | 20,000/- |
| 3 | ಭಾಷಾಂತಾರಕಾರರಿಗೆ (ಡೆಮ್ಮಿ 1/8 ಮುದ್ರಿತ ಪುಟಕ್ಕೆ) | 225/- |
| 4 | ಸ್ವತಂತ್ರ ಕೃತಿ ರಚನೆಗೆ (ಪ್ರತಿ ಮುದ್ರಿತ ಪುಟಕ್ಕೆ) | 250/- |
| 5 | ಡಿಟಿಪಿ ಕಾರ್ಯಕ್ಕೆ (ಡೆಮ್ಮಿ 1/8 ಮುದ್ರಿತ ಪ್ರತಿ ಪುಟಕ್ಕೆ) | 25/- |
| 6 | ಕರಡು ಪರಿಶೀಲಕರಿಗೆ (ಡೆಮ್ಮಿ 1/8 ಮುದ್ರಿತ ಪ್ರತಿ ಪುಟಕ್ಕೆ) | 10/- |
| 7 | ವಿವಿಧ ಭಾಷೆಯ ಮೂಲ ಲೇಖಕರಿಗೆ ರಾಯಧನ (ಅನುವಾದಿತ ಪುಸ್ತಕದ ಮುಖಬೆಲೆ ಶೇ.5 ರಷ್ಟು) | 5% |
| 8 | ಸ್ವತಂತ್ರ ಕೃತಿಯು ಮರು ಮುದ್ರಣಗೊಂಡಾಗ ಲೇಖಕರಿಗೆ ರಾಯಧನ (ಪುಸ್ತಕದ ಮುಖಬೆಲೆಯ ಶೇ.5 ರಷ್ಟು) | 5% |

| | |
|---|---|
| 2020-21 Spl. 10.4 | ಕಾರ್ಯದರ್ಶಿ, ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿವರ್ಗದವರ ಸಂಘ (ರಿ), ಕ್ರಾಫರ್ಡ್ ಭವನ, ಮೈಸೂರು ಇವರು ತಮ್ಮ ಪತ್ರದಲ್ಲಿ ಕೋವಿಡ್-19 ವೈರಾಣುವಿನ ಹರಡುವಿಕೆಯಿಂದ ಒಳಗಾಗುವ ಅಧ್ಯಾಪಕ/ಅಧ್ಯಾಪಕೇತರ ಸಿಬ್ಬಂದಿಗಳ ವೈದ್ಯಕೀಯ ವೆಚ್ಚವನ್ನು ಮರುಭರಿಕೆ ಮಾಡಿಕೊಡುವ ಬಗ್ಗೆ |
| ತೀರ್ಮಾನ | ಕೋವಿಡ್-19 ವೈರಾಣುವಿನ ಹರಡುವಿಕೆಯಿಂದ ಒಳಗಾಗುವ ಅಧ್ಯಾಪಕ/ಅಧ್ಯಾಪಕೇತರ ಸಿಬ್ಬಂದಿಗಳ ವೈದ್ಯಕೀಯ ವೆಚ್ಚವನ್ನು ಸರ್ಕಾರದಿಂದ ಉಚಿತವಾಗಿ ಅಥವಾ ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳುವ ಉದ್ಯೋಗಿಗಳನ್ನು ಹೊರತುಪಡಿಸಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ವಿಶ್ವವಿದ್ಯಾನಿಲಯದ ವೈದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಾಮರ್ಶನ ಸಮಿತಿ ರಚಿಸಿ, ಸಮಿತಿಯ ಶಿಫಾರಸ್ಸಿನನ್ವಯ ವೈದ್ಯಕೀಯ ವೆಚ್ಚವನ್ನು ಮರುಭರಿಕೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |
| 2020-21 Spl. 10.5 | ಅತಿಥಿ ಉಪನ್ಯಾಸಕರುಗಳ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗ/ಕೇಂದ್ರ ಹಾಗೂ ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಕಳೆದ ಐದು ವರ್ಷಗಳಿಂದ ವೇತನ ಪರಿಷ್ಕರಣೆ ಮಾಡದಿರುವ ಹಿನ್ನೆಲೆಯಲ್ಲಿ, ಅತಿಥಿ ಉಪನ್ಯಾಸಕರುಗಳ ಮನವಿಯ ಮೇರೆಗೆ ಹಾಗೂ ವಿಶ್ವವಿದ್ಯಾನಿಲಯದ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು 2020-21ನೇ ಶೈಕ್ಷಣಿಕ ಸಾಲಿನಿಂದ ಅತಿಥಿ ಉಪನ್ಯಾಸಕರು ಪಡೆಯುತ್ತಿರುವ ಪ್ರಸ್ತುತ ವೇತನಕ್ಕೆ ಶೇ.23 ರಷ್ಟು ವೇತನವನ್ನು ಹೆಚ್ಚಿಸಿ ಪರಿಷ್ಕರಿಸಲಾಗಿರುತ್ತದೆಂದು ಸಭೆಯಲ್ಲಿ ಮಾನ್ಯ ಕುಲಪತಿಯವರು ಪ್ರಸ್ತಾಪಿಸಿದರು.<br><br>ಪ್ರೊ.ಎಸ್.ಡಿ.ದೊಡ್ಡಚಾರಿ, ಡಾ.ಈ.ಸಿ.ಲಿಂಗರಾಜ್ ಗೌಡ, ಡಾ.ಎಂ.ಎಸ್.ದಾಮೋಧರ ಹಾಗೂ ಡಾ. ಸೈಯದ್ ಕಾರೂಖ ಮೊಹಿದ್ದಿನ್ ಅವರುಗಳು ಮಾತನಾಡಿ, ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ ಅತಿಥಿ ಉಪನ್ಯಾಸಕರುಗಳಿಗೂ ಈ ಪರಿಷ್ಕೃತ ವೇತನವನ್ನು ನೀಡಬೇಕೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಈ ಸಂಬಂಧ ಈಗಾಗಲೇ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದಿದ್ದು, ಕಾನೂನು ಸಲಹೆಗಾರರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ ಅತಿಥಿ ಉಪನ್ಯಾಸಕರುಗಳ ವೇತನವನ್ನು ಯಥಾಸ್ಥಿತಿಯಲ್ಲಿಟ್ಟು, ಇತರೆ ಅತಿಥಿ ಉಪನ್ಯಾಸಕರುಗಳಿಗೆ ವೇತನ ಪರಿಷ್ಕರಿಸಬಹುದೆಂದು ತಿಳಿಸಿರುತ್ತಾರೆ. ಆದರೂ ವೇತನ ಪರಿಷ್ಕರಣೆಯಾದ ನಂತರ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ ಅತಿಥಿ ಉಪನ್ಯಾಸಕರುಗಳು ವೇತನ ಪರಿಷ್ಕರಣೆ ಸಂಬಂಧ ನ್ಯಾಯಾಲಯದ ಮಧ್ಯಂತರ ಆದೇಶ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಲ್ಲಿ ವಿಶ್ವವಿದ್ಯಾನಿಲಯವು ವೇತನ ಪರಿಷ್ಕರಣೆ ಆದೇಶ ಜಾರಿಗೊಳಿಸಿದ |

ದಿನಾಂಕದಿಂದಲೇ ಇವರಿಗೂ ವೇತನ ಪರಿಷ್ಕರಣೆ ಜಾರಿಗೊಳಿಸಲಾಗುವುದೆಂದು ತಿಳಿಸಿದರು.

ಪ್ರೊ.ಎಸ್.ಡಿ.ದೊಡ್ಡಚಾರಿ ಅವರು ಮಾತನಾಡಿ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಲ್ಲಿ ಇಬ್ಬರು ಅತಿಥಿ ಉಪನ್ಯಾಸಕರುಗಳ ವಯೋಮಿತಿ 60 ವರ್ಷ ಪೂರ್ಣಗೊಂಡಿರುವುದರಿಂದ ಮಾನವೀಯತೆ ದೃಷ್ಟಿಯಿಂದ ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಟ್ಟು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು. ಈ ಪ್ರಸ್ತಾಪಕ್ಕೆ ಇತರೆ ಸಿಂಡಿಕೇಟ್ ಸದಸ್ಯರುಗಳು ದನಿಗೂಡಿಸಿದರು. ಈ ಸಂಬಂಧ ಕುಲಸಚಿವರು ಮಾತನಾಡಿ, ವಯೋಮಿತಿ 60 ವರ್ಷ ಮೀರಿರುವವರನ್ನು ಯಾವುದೇ ಕಾರಣಕ್ಕೂ ಸೇವೆಯಲ್ಲಿ ಮುಂದುವರೆಸಬಾರದೆಂದು, ಒಂದು ವೇಳೆ ಅಂತಹವರನ್ನು ಮುಂದುವರೆಸಿದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಸರ್ಕಾರವು ಸ್ಪಷ್ಟವಾಗಿ ನಿರ್ದೇಶನ ನೀಡಿರುತ್ತದೆಂದು ತಿಳಿಸಿದರು.

ಈ ಅಂಶಗಳನ್ನು ಗಮನಿಸಿದ ಮಾನ್ಯ ಕುಲಪತಿಯವರು ವಯೋಮಿತಿ 60 ವರ್ಷ ಮೀರಿರುವ ಇಬ್ಬರು ಅತಿಥಿ ಉಪನ್ಯಾಸಕರುಗಳನ್ನು ಬಿಡುಗಡೆ ಮಾಡಿ, ಸದರಿ ಅತಿಥಿ ಉಪನ್ಯಾಸಕರುಗಳು ತಾವು ಕಾರ್ಯನಿರ್ವಹಿಸುತ್ತಿರುವ ವಿಭಾಗದ ಅಧ್ಯಕ್ಷರಿಂದ ಇವರ ಸೇವೆಯನ್ನು ಮುಂದುವರೆಸುವ ಬಗ್ಗೆ ಶಿಫಾರಸ್ಸು ಪತ್ರ ತಂದಲ್ಲಿ, ಆಹ್ವಾನಿತ ಉಪನ್ಯಾಸಕರನ್ನಾಗಿ ನೇಮಕ ಮಾಡಲಾಗುವುದೆಂದು ತಿಳಿಸಿದರು.

**ತೀರ್ಮಾನ**

2020-21ನೇ ಶೈಕ್ಷಣಿಕ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗ/ಕೇಂದ್ರ ಹಾಗೂ ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಈ ಕೆಳಕಂಡಂತೆ ವೇತನ/ಸಂಭಾವನೆ ಪರಿಷ್ಕರಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

| ಕ್ರ. ಸಂ. | ವಾರಕ್ಕೆ ನಿಗದಿಪಡಿಸಿರುವ ಕಾರ್ಯಭಾರ (ಗಂಟೆಗಳಲ್ಲಿ) | ಪ್ರಸ್ತುತ ನಿಗದಿಪಡಿಸಿರುವ ಸಂಭಾವನೆ | | ಪರಿಷ್ಕರಿಸಿರುವ ಸಂಭಾವನೆ | |
|---|---|---|---|---|---|
| | | NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ನಿಗದಿಪಡಿಸಿದ್ದ ಸಂಭಾವನೆ (ರೂ.ಗಳಲ್ಲಿ) | NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರದ ಅತಿಥಿ ಉಪನ್ಯಾಸಕರುಗಳಿಗೆ ನಿಗದಿಪಡಿಸಿದ್ದ ಸಂಭಾವನೆ (ರೂ.ಗಳಲ್ಲಿ) | NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ನಿಗದಿಪಡಿಸಿದ್ದ ಸಂಭಾವನೆ (ರೂ.ಗಳಲ್ಲಿ) | NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರುದ ಅತಿಥಿ ಉಪನ್ಯಾಸಕರುಗಳಿಗೆ ನಿಗದಿಪಡಿಸಿದ್ದ ಸಂಭಾವನೆ (ರೂ.ಗಳಲ್ಲಿ) |
| 1 | 04 | 7,500/- | 6,500/- | 8,500/- | 8,000/- |
| 2 | 08 | 15,000/- | 13,000/- | 18,500/- | 16,000/- |
| 3 | 12 | 22,500/- | 19,500/- | 28,000/- | 24,000/- |

**ಇತರೆ ವಿಷಯಗಳು:**

❖ ಶ್ರೀಮತಿ.ಪವಿತ್ರ.ವೈ.ಕೆ, ಸಿಂಡಿಕೇಟ್ ಸದಸ್ಯರು ಮಾತನಾಡಿ, ಒಬ್ಬರು ಮಹಿಳಾ ಅಧ್ಯಾಪಕರು ಗರ್ಭಿಣಿಯಾಗಿದ್ದು ಹಾಗೂ ಕೋವಿಡ್-19 ನಿಂದ ಬಳಲುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಅನ್‌ಲೈನ್ ತರಗತಿಯನ್ನು ಕಾಲೇಜಿಗೆ ಬಂದು ತೆಗೆದುಕೊಳ್ಳುವ ಬದಲು work from home ನಲ್ಲಿ ಅನ್‌ಲೈನ್ ತರಗತಿ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು. ಇದಕ್ಕೆ ಮಾನ್ಯ ಕುಲಪತಿಯವರು ಹಾಗೂ ಸಿಂಡಿಕೇಟ್ ಸದಸ್ಯರುಗಳು ಒಪ್ಪಿಗೆ ಸೂಚಿಸಿದರು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ

ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು